ಬದುಕು ಬದಲಿಸಿದ

# ಭಾವೇಶ್ ಭಾಟಿಯಾ

## ಅಂಧ ಉದ್ಯೋಗ ಜನಕನ ಸಾಹಸಗಾಥೆ

■ ನೇಮಿಚಂದ್ರ

ಕಲೆ: ಮನೋಹರ ಕೆ. ಆಚಾರ್ಯ



## ಒಲವೇ ಅವರ ಬದುಕು; ಅದಕು ಇದಕು ಎದಕು...

'ನಾನು ಕಳೆದ ಮೂರು ದಿನಗಳಲ್ಲಿ ಬಹಳಷ್ಟು ಯೋಚಿಸಿದೆ. ಈ ಮದುವೆಯಿಂದಾಗುವ ಒಳಿತುಕೆಡುಕುಗಳ ಬಗ್ಗೆ ದೀರ್ಘವಾಗಿ ಯೋಚಿಸಿದೆ. ನನ್ನ ನಿರ್ಧಾರ ನಿಜಕ್ಕೂ ಸರಿ ಇದೆ ಎಂದು ನನಗೇ ಮನವರಿಕೆಯಾಯಿತು. ಮಿಸ್ಟರ್ ಭಾಟಿಯಾ, ನನ್ನ ತಂದೆ ತಾಯಿ ನನ್ನ ಮದುವೆಯನ್ನು ಎಲ್ಲಿಯಾದರೂ ಮಾಡೇ ಮಾಡುವರು. ಹುಡುಗಿಯರಿಗೆ ಮೊದಲಿಂದಲೂ ಹೇಳಿ ಬೆಳೆಸುತ್ತಾರೆ, 'ಹೆಣ್ಣು ಮಕ್ಕಳ ಮದುವೆಯನ್ನು ತಮಗಿಂತ ಹೆಚ್ಚು ಸ್ಥಿತಿವಂತರ ಮನೆಯಲ್ಲಿ ಮಾಡಬೇಕು. ತಮ್ಮ ಅಂತಸ್ತಿಗಿಂತ ಮೇಲಿರುವವರ ಜೊತೆ ವಿವಾಹವಾಗಬೇಕು. ನನ್ನೊಡನೆಯೂ ಇದೇ ಆಗುತ್ತದೆ. ನಾನು ಹುಟ್ಟಿನಿಂದಲೂ ಹಣದ ಹೊರತು ಮತ್ತೇನನ್ನೂ ನೋಡಿಲ್ಲ. ಮದುವೆಯ ನಂತರ ದೊಡ್ಡ ಮನೆತನಕ್ಕೆ ಸೇರುತ್ತೇನೆ. ಅದರ ಅರ್ಥ ಮತ್ತಷ್ಟು ಹಣ. ಈ ಬಗೆಯ ಮದುವೆ ಮತ್ತು ಸಂಸಾರದಲ್ಲಿ ನನಗೆ ಯಾವ ಉದ್ದೇಶವೂ ಕಾಣುತ್ತಿಲ್ಲ. ಯಾವ ಲಕ್ಷ್ಯವೂ ಇಲ್ಲದೆ ಬದುಕು ನಡೆಸುವುದು ನನಗೆ ವ್ಯರ್ಥವಾಗಿ ಕಾಣಿಸುತ್ತದೆ. ನಿಮ್ಮನ್ನು ಭೇಟಿಯಾಗುವ ಮೊದಲು ನಾನು ಇಂತಹುದೇ ಒಂದು ಉದ್ದೇಶದ ಹುಡುಕಾಟದಲ್ಲಿದ್ದೆ. ಈಗ ನನಗೆ ನನ್ನ ಜೀವನದ ಗುರಿ ಸ್ಪಷ್ಟವಾಗಿ ಕಾಣಿಸುತ್ತಿದೆ. ನೀವು ಹೇಳುತ್ತಿರುವ ಅಂಧಕಾರ, ಹೊರ ಜಗತ್ತಿನ ಈ ತೋರಿಕೆಯ ಕಣ್ಣುಕುಕ್ಕುವ ಬೆಳಕನ್ನೂ ಹಿಂದೆ ಹಾಕಬಲ್ಲದು. ನಾನು ನಿಮ್ಮ ಮೇಲಿನ ಅನುಕಂಪದಿಂದ ಮದುವೆಯಾಗಲು ಹೊರಟಿಲ್ಲ. ನಿಮಗೆ ಏಕೆ ಅರ್ಥವಾಗುತ್ತಿಲ್ಲ, ನಿಮ್ಮ ಬಳಿ ಇರುವ ಕಲೆ–ಕೌಶಲ ಇವನ್ನು ನಾನು ಇಲ್ಲಿಯವರೆಗೂ ಯಾವ ಕುರುಡ ವ್ಯಕ್ತಿಯಲ್ಲೂ ಕಂಡಿರಲಿಲ್ಲ. ನಿಮ್ಮ ಅಂತರಂಗದ ಬೆಳಕು ನನಗೆ ಕಾಣುತ್ತಿದೆ. ಮುಂಬಯಿಯಲ್ಲಿ ಅದೆಷ್ಟು ಜನ ದೃಷ್ಟಿಹೀನರನ್ನು ನಾನು ನೋಡುತ್ತೇನೆ. ಅವರೆಲ್ಲ ಭಿಕ್ಷೆ ಬೇಡಿ ತಮ್ಮ ಜೀವನ ನಡೆಸುತ್ತಿದ್ದಾರೆ. ದಿಟವಾದ ಅಂಧಕಾರದಲ್ಲಿ ಇರುವ ಆ ಜನರ ಬದುಕನ್ನು ನಾವಿಬ್ಬರೂ ಸೇರಿ ಪರಿವರ್ತಿಸಬಲ್ಲೆವು. ನಮ್ಮಿಬ್ಬರ ಬದುಕಿನ ಉದ್ದೇಶ ಒಂದೇ ಆಗುವುದು. ನಾವು ಜೊತೆಯಾಗಿ ಈ ಎಲ್ಲ ಅಂಧಮಿತ್ರರ ಬದುಕಿಗೆ ಬೆಳಕು ತರುವತ್ತ ಹೆಜ್ಜೆ ಹಾಕೋಣ. ನನಗೆ ಪೂರ್ಣ ನಂಬಿಕೆ ಇದೆ ಭಾವೇಶ್‌ಜಿ, ನಿಮ್ಮ ಜೊತೆ ನನಗೆ ಸಿಕ್ಕರೆ, ನಾವು ಆಕಾಶವನ್ನೇ ಮುಟ್ಟಬಹುದು. ಅಂಧ ಜಗತ್ತಿನಲ್ಲಿ ನಾವು ಕ್ರಾಂತಿ ತರಬಹುದು. ಇವತ್ತು ನೀವು ಬೀದಿಯಲ್ಲಿ ಮೋಂಬತ್ತಿ ಮಾರುತ್ತಿದ್ದರೆ ಏನಂತೆ? ನಾನು ನಿಮ್ಮಲ್ಲಿ ಓರ್ವ ಉದ್ಯಮಿಯಲ್ಲಿ ಇರಬೇಕಾದ ಎಲ್ಲ ಗುಣ ಲಕ್ಷಣಗಳನ್ನು ಕಾಣುತ್ತಿದ್ದೇನೆ. ನಿಮ್ಮಲ್ಲಿರುವ ಸರಳ ಹೃದಯ, ನಿಮ್ಮನ್ನು ಈ ಜನರ ಗುಂಪಿನಿಂದ ಬೇರೆಯೇ ಆಗಿ ನಿಲ್ಲಿಸುತ್ತದೆ. ನೀವು ಏಕ್ದಂ ವಿಭಿನ್ನರಿದ್ದೀರಿ, ವಿಶೇಷ ವ್ಯಕ್ತಿಯಾಗಿದ್ದೀರಿ' ನೀತಾ ದೀರ್ಘವಾಗಿ ವಿವರಿಸಿದರು.

ನೀತಾ ಮಾತು ನಿಲ್ಲಿಸಿದಾಗ, ಸುತ್ತಲೂ ನಿಶ್ಶಬ್ದ ಮೌನ. ಕೆಲವು ಕ್ಷಣ ಭಾವೇಶ್ ಅವರಿಗೆ ತಾವು ಎಲ್ಲಿ ನಿಂತಿದ್ದೇನೆ ಎಂಬುದೂ ಮರೆತುಹೋದಂತಿತ್ತು. ನೀತಾ ಅವರ ಮಾತುಗಳು ಅವರಿಗೆ ಅವರ ಎಷ್ಟೋ ಜನ್ಮಗಳ ಪುಣ್ಯದ ಫಲವೆಂಬಂತೆ ಕೇಳಿಸುತ್ತಿದ್ದವು. ಆದರೂ ಅವರು ತಮ್ಮ ಅದೃಷ್ಟವನ್ನು ನಂಬಲು ಈ ಕ್ಷಣ ಅಸಮರ್ಥರಿದ್ದರು. ಅವರ ಮನಸ್ಸಿನ ಅನುಮಾನ, ಹೃದಯದ ಶಂಕೆ ಅವರನ್ನು ಹಿಂದಕ್ಕೆ ಎಳೆದಿತ್ತು. ಎದೆಯ ಕದನದಲ್ಲಿ ಅದೆಷ್ಟು ಹೊತ್ತು ಮೌನವಿದ್ದರೋ ತಿಳಿಯದು. ಕಡೆಗೆ ದೀರ್ಘವಾಗಿ ಉಸಿರೆಳೆದು ಭಾವೇಶ್ ಹೇಳತೊಡಗಿದರು, 'ನಿಮಗೆ ಗೊತ್ತಿದೆ, ನನ್ನ ಆರ್ಥಿಕ ಪರಿಸ್ಥಿತಿ ಹೇಗಿದೆ ಎಂದು. ನಿಮ್ಮ ಶ್ರೀಮಂತಿಕೆ ನನ್ನ ಆತ್ಮಾಭಿಮಾನವನ್ನು ಉಪೇಕ್ಷಿಸಬಾರದು. ನೀವು ಹೇಳುವಂತೆ ನಾವು ಮುಂದೆ ಹೆಜ್ಜೆ ಇಡಬಹುದು. ಆದರೆ ನನ್ನ ಒಂದು ಷರತ್ತನ್ನು ನೀವು ಒಪ್ಪಿಕೊಳ್ಳಬೇಕು'.

ನೀತಾ ಅವರೆಡೆಗೆ ಬಾಗಿ ಕಾತುರದಿಂದ ಅವರನ್ನು ನೋಡತೊಡಗಿದರು.